

ಚಿತ್ರ: ಡಿ.ಸಿ. ನಾಗೇಶ್

# ವಸುಮತಿ ಉಡುಪ

ಹುಟ್ಟೂರು ಹೊಸನಗರ ತಾಲೂಕಿನ ನಗರ. ತೌರೂರು ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ. ತೀರ್ಥಹಳ್ಳಿಯಲ್ಲಿ ಪದವಿಪೂರ್ವ ಶಿಕ್ಷಣ. ಪ್ರಸ್ತುತ ಮೈಸೂರಿನಲ್ಲಿ ವಾಸ. ಸರಳ, ನೇರ ಭಾಷೆ, ವಿಶಿಷ್ಟ ನಿರೂಪಣೆ, ವಿಭಿನ್ನ ಶೈಲಿಯಿಂದ ಕನ್ನಡ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡವರು ವಸುಮತಿ ಉಡುಪ. ಕವಿತೆಗಳಿಂದ ಆರಂಭವಾದ ಅವರ ಬರವಣಿಗೆ ಕತೆ, ನಾಟಕ, ಮಕ್ಕಳ ಸಾಹಿತ್ಯ, ಪ್ರಬಂಧ, ಕಾದಂಬರಿ ಸೇರಿದಂತೆ ಹಲವು ಪ್ರಕಾರಗಳಲ್ಲಿ ಚಾಚಿಕೊಂಡಿದೆ. ಅವರ ಬಹುತೇಕ ಕತೆಗಳಲ್ಲಿ ಮಲೆನಾಡಿನ ಜೀವನ ಶೈಲಿ, ಪರಿಸರ, ಭಾಷೆ, ಆಚಾರ–ವಿಚಾರಗಳ ನೆರಳಿರುವುದನ್ನು ಕಾಣಬಹುದು. ತಾವು ಬೆಳೆದ, ವಾಸಿಸುವ ಪರಿಸರದಲ್ಲಿ ಕಣ್ಣಿಗೆ ಕಾಣುವ ಮಧ್ಯಮ, ಕೆಳಮಧ್ಯಮ ವರ್ಗದ ಜೀವನಕ್ರಮವೇ ಅವರ ಕಥಾವಸ್ತುಗಳು.

'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಮಗ್ರ ಕಥಾ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟವಾಗಿದೆ. 'ಸೀತಾಳದಂಡೆ' ಸೇರಿದಂತೆ ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಅವರ ಕೆಲವು ಕತೆಗಳು ಹಿಂದಿ, ತೆಲುಗು ಭಾಷೆಗೂ ಅನುವಾದಗೊಂಡಿವೆ. ಹಲವಾರು ಕತೆಗಳು ಆಕಾಶವಾಣಿ, ದೂರದರ್ಶನದಲ್ಲಿ ಪ್ರಸಾರಗೊಂಡಿವೆ.

ಕಥಾಪಾತ್ರಗಳು ನಿಜಜೀವನದ ವ್ಯಕ್ತಿಗಳಾಗಿದ್ದರೂ ಸಹಾ ಅವರಿಗೇ ಅವರ ಗುರುತು ಸಿಗದಂತೆ ಸೂಕ್ತ ಮಾರ್ಪಾಡುಗಳಿಂದ ನಿಜರೂಪವನ್ನು ಮರೆ ಮಾಡಿ ಚಿತ್ರಿಸುವುದು ನನ್ನ ಪರಿ. ಯಾವುದೋ ಒಂದು ಘಟನೆ ಅಥವಾ ಮಾತಿನ ನಡುವೆ ನುಸುಳಿದ ಒಂದು ಎಳೆ ಕೂಡಾ ಮನಸ್ಸನ್ನು ಆವರಿಸಿಕೊಂಡು ಕತೆಯಾಗಲು ಹವಣಿಸಿದ್ದಿದೆ. ಇನ್ನೆಷ್ಟೋ ಸಲ ವಾಸ್ತವತೆ ಅನ್ನುವುದು ಕಲ್ಪನೆಯ ರಂಗು ಬಳಿದುಕೊಂಡು ತನ್ನ ಮೂಲರೂಪವನ್ನೇ ಮರೆಸುವಷ್ಟು ಬದಲಾದದ್ದಿದೆ. ಕಥೆಯೊಂದರ ಆರಂಭ, ಅಂತ್ಯದ ಬಗ್ಗೆ ಒಂದು ನಿರ್ದಿಷ್ಟ ಕಲ್ಪನೆ ಇಟ್ಟುಕೊಂಡು ಬರೆಯಲಾರಂಭಿಸಿದರೂ ಕಥೆ ಮುಂದುವರಿಯುತ್ತಿದ್ದಂತೆ ಪೂರ್ವಯೋಜಿತ ಕಲ್ಪನೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಮತ್ತೊಂದೇ ರೀತಿಯಲ್ಲಿ ಮುಕ್ತಾಯವಾಗುವುದುಂಟು. ಪ್ರಜ್ಞಾಪೂರ್ವಕವಾಗಿ ಆರಂಭವಾದ ಕತೆ ಅಪ್ರಜ್ಞಾಪೂರ್ವಕವಾಗಿ ಇನ್ನೆಲ್ಲಿಗೋ ಎಳೆದೊಯ್ಯುವುದು ಬರಹಗಾರರೆಲ್ಲರ ಅನುಭವ ಮತ್ತು ವಿಸ್ಮಯ ಎಂದು ನನ್ನ ಅನಿಸಿಕೆ. ಹಸ್ತಪ್ರತಿಯ ಹಂತದಲ್ಲಿ ನನ್ನ ಕತೆಯನ್ನೋ, ಕಾದಂಬರಿಯನ್ನೋ ಅನ್ಯರ ಅವಗಾಹನೆಗೆ, ವಿಮರ್ಶೆಗೆ, ತಿದ್ದುಪಡಿಗೆ ಒಪ್ಪಿಸುವುದು ನನಗೆ ಒಗ್ಗದ ವಿಚಾರ. ನನ್ನ ಬರಹ ಕೇವಲ ನನ್ನದು ಮತ್ತು ಇನ್ನೊಬ್ಬರ ದೃಷ್ಟಿಯಲ್ಲಿ ಅದನ್ನು ಮಾರ್ಪಾಡು ಮಾಡುವುದು ನನ್ನಿಂದ ಅಸಾಧ್ಯ. ಪ್ರಕಟಣೆಯ ನಂತರದ ವಿಮರ್ಶೆ, ಒಂದೊಮ್ಮೆ ಅಪರೂಪಕ್ಕೆ ಅದೇನಾದರೂ ಬಂದರೆ, ನನ್ನ ಮುಂದಿನ ಬರವಣಿಗೆಗೆ ಪೂರಕವಾಗಿ